Publication ~ Vijay Karnataka
Date ~ December 13, 2007
Edition ~ Bangalore

Route Map launched : MapmyIndia

# ಮಾರ್ಗ ತೋರಿಸುವ ಮ್ಯಾಂಫಿ ನ್ಯಾವಿಗೇಟರ್

**ಬೆಂಗಳೂರು** : ನಿರ್ಜನ ಪ್ರದೇಶದಲ್ಲಿ ಒಬ್ಬರೇ ಕಾರನ್ನು ಚಾಲನೆ ಮಾಡಿಕೊಂಡು ಹೋಗುವಾಗ, ಇದ್ದಕ್ಕಿದ್ದಂತೆ ಎದುರಾದ ಎರಡು ಮಾರ್ಗದಲ್ಲಿ ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕೆಂಬ ಗೊಂದಲ ಉಂಟಾಗಬಹುದು. ಇದಕ್ಕೆ ಪರಿಹಾರ ಎಂಬಂತೆ ಇದೀಗ ಭಾರತದ ರಸ್ತೆಗಳ ಮಾರ್ಗ ತೋರಿಸುವ ಮ್ಯಾಂಫಿ ಇಂಡಿಯಾ ಕಾರ್ ನ್ಯಾವಿಗೇಟರ್ ಎಂಬ ಪುಟ್ಟ ಸಾಧನ ಮಾರುಕಟ್ಟೆಯಲ್ಲಿ ಪ್ರಚಲಿತದಲ್ಲಿದ್ದು, ಹಲವಾರು ಸೌಲಭ್ಯವನ್ನೊಳಗೊಂಡಿದೆ.

ಮ್ಯಾಂಫಿ ಇಂಡಿಯಾ ನ್ಯಾವಿಗೇಟರ್ ನೋಡಲು ತೆಳುವಾಗಿದ್ದು, ಸುಂದರವಾಗಿದೆ. ಭಾರತದಾದ್ಯಂತ ರಸ್ತೆಗಳ ಮೇಲೆ ಸಂಚರಿಸುವಾಗ ಉಪಗ್ರಹದ ಸಹಾಯದ ಮೂಲಕ ಪ್ರದೇಶ ಹಾಗೂ ದಿಕ್ಕನ್ನು ಗುರುತಿಸಿ, ಪರದೆ ಮೇಲೆ ಬಿಂಬಿಸುತ್ತದೆ. ಇದಕ್ಕೆ ಧ್ವನಿ ವ್ಯವಸ್ಥೆಯೂ ಇದೆ. ಕಾರಿನ ಡ್ಯಾಶ್ ಬೋರ್ಡ್ ಮೇಲೆ ಅಳವಡಿಸಬಹುದು. ಇಲ್ಲವೇ ಕೈಯಲ್ಲಿ ಹಿಡಿದು ನೋಡಬಹುದು ಎನ್ನುತ್ತಾರೆ ಮ್ಯಾಂಫಿ ಇಂಡಿಯಾ ಪ್ರಚಾರ ಸಂಸ್ಥೆಯಾದ ಸಿಇ ಇನ್ಫೋ ಸಿಸ್ಟಂನ ಕಾರ್ಯನಿರ್ವಹಣಾ ನಿರ್ದೇಶಕ ರಾಕೇಶ್ ವರ್ಮಾ.

ಆಟೊಮೊಬೈಲ್, ಇಂಟರ್‌ನೆಟ್ ಹಾಗೂ ಮೊಬೈಲ್ ಕಂಪನಿಗಳ ಸಹಯೋಗದೊಂದಿಗೆ ಜಾರಿ ಬರುತ್ತಿರುವ ಈ ಸಾಧನದ ತಯಾರಿಕೆಗೆ ಈಗಾಗಲೇ ಮಾರುಕಟ್ಟೆಯಲ್ಲಿ ಸುಮಾರು 5 ಮಿಲಿಯನ್ ಡಾಲರ್ ಹಣ ಹೂಡಲಾಗಿದೆ. ಇದರಲ್ಲಿ ಸಿನಿಮಾ, ಎಂಪಿ3 ಇನ್ನಿತರ ಸೌಲಭ್ಯಗಳು ಲಭ್ಯವಿದೆ ಎನ್ನುತ್ತಾರೆ.

ಇತ್ತೀಚೆಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಇನ್-ಕಾರ್ ಜಿಪಿಎಸ್ ನ್ಯಾವಿಗೇಟರ್ ಉದ್ಯಮದಲ್ಲಿ ಅತ್ಯಧಿಕ ಬೆಳವಣಿಗೆ ಕಂಡು ಬರುತ್ತಿದ್ದು, ಇದಕ್ಕೆ ಪೂರಕ ಎಂಬಂತೆ ಅಮೆರಿಕದಲ್ಲಿ 20 ಮಿಲಿಯನ್ ವೈಯಕ್ತಿಕ ನ್ಯಾವಿಗೇಷನ್ ಉಪಕರಣ ಹಾಗೂ ಯೂರೋಪ್‌ನಲ್ಲಿ 30 ಮಿಲಿಯನ್ ಮಾರಾಟವಾಗಿದೆ ಎನ್ನುತ್ತಾರೆ